ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ:ಸಿಬ್ಬಂದಿ-3/3ಸಿ/ಸಿಆರ್-12/2015-16

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1,
ಗಾಂಧಿನಗರ, ಬೆಂಗಳೂರು-09,
ದಿನಾಂಕ: 19-09-2018. 20

## ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ಲೋಕಸೇವಾ ಆಯೋಗದಿಂದ ವಾಣಿಜ್ಯ ತೆರಿಗೆಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ: ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಇ(3)485 /2017-18/ಪಿಎಸ್‌ಸಿ, ದಿನಾಂಕ: 27-11-2017.

** ** **

ಕರ್ನಾಟಕ ಲೋಕಸೇವಾ ಆಯೋಗವು ಉಲ್ಲೇಖದ ಅಧಿಸೂಚನೆಯ ಅನ್ವಯ ವಾಣಿಜ್ಯ ತೆರಿಗೆಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾದ ಒಂಭತ್ತು ಅಭ್ಯರ್ಥಿಗಳ ಪಟ್ಟಿಯನ್ನು ರವಾನಿಸಿರುತ್ತದೆ. ಈ ಒಂಭತ್ತು ಅಭ್ಯರ್ಥಿಗಳ ಪೈಕಿ ಆರು ಅಭ್ಯರ್ಥಿಗಳು ದಾಖಲಾತಿಗಳ ಪರಿಶೀಲನೆಗೆ ಹಾಜರಾಗಿರುತ್ತಾರೆ. ಈ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿವಿಧ ಮೀಸಲಾತಿ ಕೋಟಾದಡಿ ಆಯ್ಕೆಯಾದ ಈ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರಗಳ ದೃಢೀಕರಣ ಹಾಗೂ ಪೊಲೀಸ್ ತನಿಖಾ ವರದಿಗಳನ್ನು ಪಡೆಯಲಾಗಿದೆ. ಈ ದೃಢೀಕರಣ ಪತ್ರಗಳು ಮತ್ತು ಪರಿಶೀಲನಾ ವರದಿಗಳು ಕ್ರಮಬದ್ಧವಾಗಿರುವುದರಿಂದ, ಈ ಕೆಳಕಂಡ ಆರು ಅಭ್ಯರ್ಥಿಗಳನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೇತನ ಶ್ರೇಣಿ ರೂ.21400-500-22400-550-24600-600-27000-650-29600-750-32600-850-36000-950-39800-1100-42000 ರಲ್ಲಿ ಪರೀಕ್ಷಾರ್ಥಿಗಳನ್ನಾಗಿ ನೇಮಕ ಮಾಡಿ ಅವರ ಹೆಸರಿನ ಮುಂದೆ ಅಂಕಣ-6ರಲ್ಲಿ ಕಾಣಿಸಿರುವ ಕಛೇರಿ/ವಿಭಾಗಗಳಿಗೆ ಹಂಚಿಕೆ ಮಾಡಿ ಆದೇಶಿಸಲಾಗಿದೆ:-

| ಉಳಿದ ಮೂಲ ವೃಂದ | | | | | |
|---|---|---|---|---|---|
| ಕ್ರ ಸಂ | ಕೆ.ಪಿ.ಎಸ್.ಸಿ. ಕ್ರ.ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಜನ್ಮ ದಿನಾಂಕ | ಮೀಸಲಾತಿ | ನೇಮಕಾತಿ ಮಾಡಲಾದ ಕಛೇರಿ |
| 1 | 2 | 3 | 4 | 5 | 6 |
| 1 | 1 | ಲೋಕೇಶ ಎಸ್.<br>#130, ಅಪ್ಪಗೆರೆ ಗ್ರಾಮ,<br>ಚನ್ನಪಟ್ಟಣ ತಾಲ್ಲೂಕು,<br>ರಾಮನಗರ ಜಿಲ್ಲೆ,<br>ರಾಮನಗರ-562160. | 04-08-1987 | ಪ.ಜಾ. | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮನವಿಗಳು)-2, ಬೆಂಗಳೂರು.<br>(ಖಾಲಿ ಹುದ್ದೆಗೆ) |

| | | | | | |
|---|---|---|---|---|---|
| 2 | 3 | ಜ್ಯೋತಿ ಬಿ.ಆರ್.<br>ಬೆಳಗವಾಡಿ,<br>ಕಲ್ಲುದೇವನಹಳ್ಳಿ ಅಂಚೆ,<br>ಮಡಬಾಳ್ ಹೋಬಳಿ,<br>ಮಾಗಡಿ ತಾಲ್ಲೂಕು,<br>ರಾಮನಗರ-562120. | 16-07-1992 | ಸಾ.ಅ/<br>3ಎ/<br>ಮ.ಅ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಸ್ಥ.ಸ. ಮತ್ತು ಸೇ.ತೆ.ಕಛೇರಿ-020,<br>ಬೆಂಗಳೂರು.<br>(ಖಾಲಿ ಹುದ್ದೆಗೆ) |
| 3 | 4 | ನೀಲಮ್ಮ ಎಸ್.ಹುಲ್ಲೂರ್,<br>ವಾಸ & ಅಂಚೆ-<br>ಹಿರೇಮಣ್ಣೂರು,<br>ರೋಣ ತಾಲ್ಲೂಕು,<br>ಗದಗ-582209. | 31-07-1992 | ಸಾ.ಅ/<br>3ಬಿ/<br>ಮ.ಅ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಸ್ಥ.ಸ. ಮತ್ತು ಸೇ.ತೆ.ಕಛೇರಿ-350,<br>ಗದಗ. (ಖಾಲಿ ಹುದ್ದೆಗೆ) |
| 4 | 5 | ಸುಮ ಎನ್.<br>ಮನೆ ನಂ.464,<br>ಮಸೀದಿ ರಸ್ತೆ,<br>ಮಹದೇವಪುರ ಗ್ರಾಮ,<br>ಶ್ರೀರಂಗಪಟ್ಟಣ ತಾಲ್ಲೂಕು,<br>ಮಂಡ್ಯ-571809. | 13-05-1985 | 3ಎ/<br>ಮ.ಅ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಸ್ಥ.ಸ. ಮತ್ತು ಸೇ.ತೆ.ಕಛೇರಿ-210,<br>ಮಂಡ್ಯ. (ಖಾಲಿ ಹುದ್ದೆಗೆ) |
| 5 | 6 | ಉಷಾ ಜಿ.<br>ತೇಗೂರು ಗ್ರಾಮ,<br>ತೇಗೂರು,<br>ಚಿಕ್ಕಮಗಳೂರು ಅಂಚೆ,<br>ಚಿಕ್ಕಮಗಳೂರು-577101. | 02-01-1988 | 2ಎ/<br>ಮ.ಅ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಸ್ಥ.ಸ. ಮತ್ತು ಸೇ.ತೆ.ಕಛೇರಿ-250,<br>ಚಿಕ್ಕಮಗಳೂರು.<br>(ಖಾಲಿ ಹುದ್ದೆಗೆ) |
| 6 | 7 | ಮೋಹನ ರೆಡ್ಡಿ ಕೆ.ಎನ್.<br>ಓಂ ಅಸೋಸಿಯೇಟ್ಸ್,<br>ಶಾಪ್ ನಂ.11,<br>ಕಾಳಿದಾಸ ಬಿಲ್ಡಿಂಗ್,<br>ಸಿದ್ದಗಂಗಾ ಬಡಾವಣೆ,<br>2ನೇ ಅಡ್ಡರಸ್ತೆ,<br>ತುಮಕೂರು-572102. | 22-11-1977 | ಸಾ.ಅ/<br>ಮಾ.ಸೈ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಸ್ಥ.ಸ. ಮತ್ತು ಸೇ.ತೆ.ಕಛೇರಿ-175,<br>ತುಮಕೂರು.<br>(ಖಾಲಿ ಹುದ್ದೆಗೆ) |

**ಈ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:-**

1) ಈ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ.

2) ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪಟ್ಟಿಯಾನುಸಾರ ನೀಡಲಾಗುತ್ತಿರುವ ನೇಮಕಾತಿ ಆದೇಶವು ಅರ್ಜಿ ಸಂಖ್ಯೆ: 6207/2015, 10816/2016, 10957/2016, 11531/2016, 2352/2017, 3105/2017, 3124/2017, 3125/2017, 3631/2017 ಮತ್ತು 3359/2017ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಈ ನೇಮಕಾತಿ ಆದೇಶವು ಆಯ್ಕೆಪಟ್ಟಿ / ಅಭ್ಯರ್ಥಿಗಳ ಆಯ್ಕೆ / ಮೀಸಲಾತಿ ವರ್ಗ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ನೀಡಿರುವ / ನೀಡುವ ತೀರ್ಪುಗಳಿಗೆ ಒಳಪಟ್ಟಿರುತ್ತದೆ.

3) ನೇಮಕಾತಿ ಆದೇಶ ಸ್ವೀಕರಿಸಿದ 15 ದಿನಗಳ ಒಳಗಾಗಿ ಅಭ್ಯರ್ಥಿಗಳು ನಿಯುಕ್ತಿಗೊಳಿಸಲಾದ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ನಿಗದಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 18(3)ರನ್ವಯ ನೇಮಕಾತಿಯನ್ನು ರದ್ದುಪಡಿಸಲಾಗುವುದು.

4) ದ್ವಿತೀಯ ದರ್ಜೆ ಸಹಾಯಕರುಗಳು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು, 1977ರ ಅನ್ವಯ ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಕಾಲಾವಧಿಯಲ್ಲಿಯೇ ಪರೀಕ್ಷಾರ್ಥ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸುವುದು ಕಡ್ಡಾಯವಾಗಿರುತ್ತದೆ. ಪರೀಕ್ಷಾರ್ಥ ಸೇವಾವಧಿಯಲ್ಲಿ ಕರ್ನಾಟಕ ನಾಗರೀಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು 1947ರಡಿ ನಿರ್ದಿಷ್ಟಪಡಿಸಿರುವ ಈ ಕೆಳಕಂಡ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿದೆ:-

    1) ಅಕೌಂಟ್ಸ್ ಲೋಯರ್
    2) ವಾಣಿಜ್ಯ ತೆರಿಗೆ ಭಾಗ-2
    3) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ

5) ಸರ್ಕಾರದ ಆದೇಶ ಸಂಖ್ಯೆ: ಆಇ (SPL) 04 PET 2005, ದಿನಾಂಕ: 31-03-2006ರ ಮೇರೆಗೆ ಈ ನೇಮಕಾತಿಯು ಪಿಂಚಣಿ ರಹಿತವಾಗಿದ್ದು, ಹೊಸದಾಗಿ ಅನುಷ್ಠಾನಗೊಳಿಸಲಾಗಿರುವ ಅಂಶದಾಯಿ ಪಿಂಚಣಿ ಯೋಜನೆಗೆ (Contributory Pension Scheme) ಒಳಪಟ್ಟಿರುತ್ತದೆ.

6) ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದ ರೀತ್ಯಾ ನಿಷ್ಠೆಯ ಪ್ರಮಾಣ ವಚನ / ಸೇವಾ ಪ್ರತಿಜ್ಞಾ ವಿಧಿ ಸ್ವೀಕರಿಸುವುದು.

7) ಎಲ್ಲಾ ಪರೀಕ್ಷಾರ್ಥ ದ್ವಿತೀಯ ದರ್ಜೆ ಸಹಾಯಕರುಗಳ ಜನ್ಮ ದಿನಾಂಕವನ್ನು ಅವರ ಮೂಲ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ / ಇತರೆ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಿ, ಕರ್ನಾಟಕ ರಾಜ್ಯ ನೌಕರರ (ವಯೋಮಾನ ನಿರ್ಧರಿಸುವಿಕೆ) ಅಧಿನಿಯಮ 1974ರ ಕಲಂ 3ರಡಿಯಲ್ಲಿ ಕೈಗೊಳ್ಳಬೇಕಾದ ಕ್ರಮವನ್ನು ಕಛೇರಿಗಳ ಮುಖ್ಯಸ್ಥರು ಜರುಗಿಸುವುದು.

8) ಮೀಸಲಾತಿ ನಿಯಮಾವಳಿಗಳನ್ವಯ ಮೀಸಲಾತಿ ಕೋರಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಕಳುಹಿಸಿರುವ ಪರಿಶೀಲನಾ ವರದಿಯಲ್ಲಿ ಯಾವುದಾದರೂ ಲೋಪ ಕಂಡುಬಂದಲ್ಲಿ ಅವರ ಮೀಸಲಾತಿ ಕೋಟಾದಡಿ ಆಯ್ಕೆಯಾಗಿ ಪಡೆದಿದ್ದ ಆದೇಶವು ರದ್ದಾಗುತ್ತದೆ.

9) ನೇಮಕಾತಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಬಚ್ಚಿಟ್ಟಲ್ಲಿ / ಅಸಮರ್ಪಕ / ಸುಳ್ಳು ಮಾಹಿತಿಯನ್ನು ನೀಡಿ ನೇಮಕಗೊಂಡಿರುವುದು ನೇಮಕಾತಿ ಪ್ರಾಧಿಕಾರದ ಗಮನಕ್ಕೆ ಬಂದರೆ / ಬಂದಾಗ ಅಂತಹ ನೇಮಕಾತಿ ರದ್ದಾಗುತ್ತದೆ.

10) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಧೃಢೀಕರಣ ಪತ್ರವನ್ನು ಹಾಜರುಪಡಿಸತಕ್ಕದ್ದು.

11) ಸರ್ಕಾರಿ ಸೇವೆಯಲ್ಲಿದ್ದು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

12) ಅಭ್ಯರ್ಥಿಗಳ ಜ್ಯೇಷ್ಠತೆಯನ್ನು ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಆಯ್ಕೆ ಪಟ್ಟಿಯ ಕ್ರಮಾಂಕದ ಆಧಾರದ ಮೇಲೆ ಪರಿಗಣಿಸಲಾಗುವುದು.

13) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

ಪ್ರತಿ:

1) ಸಂಬಂಧಿಸಿದ ಪರೀಕ್ಷಾರ್ಥ ದ್ವಿತೀಯ ದರ್ಜೆ ಸಹಾಯಕರುಗಳಿಗೆ ನೋಂದಾಯಿತ ಅಂಚೆ ಮೂಲಕ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
3) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
4) ಎಲ್ಲಾ ಅಪರ ಆಯುಕ್ತರುಗಳಿಗೆ ಮಾಹಿತಿಗಾಗಿ.
5) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಜಾರಿ) ದ.ವ., ಕೋರಮಂಗಲ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
6) ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರುಗಳು(ಆಡಳಿತ/ಮನವಿಗಳು/ಜಾರಿ/ಜಾಗೃತಿ/ಕಿರಿಯ ಕಾಯ್ದೆಗಳು), ಇವರಿಗೆ ಮಾಹಿತಿಗಾಗಿ.
7) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮಾನವ ಸಂಪನ್ಮೂಲ ಅಭಿವೃದ್ಧಿ), ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
8) ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು(ಸಿಬ್ಬಂದಿ)–2 ಮತ್ತು 3 ಹಾಗೂ (ಶಿಸ್ತುಕ್ರಮ) ಶಾಖೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
9) ಸಂಬಂಧಿಸಿದ ಕಛೇರಿಗಳಿಗೆ.
10) ಹೆಚ್ಚುವರಿ ಪ್ರತಿಗಳು.